

# ನೋಡಿದ್ದೀರಾ.. ಡಾಂಬರ್ ಸರೋವರ..!

ಪಶ್ಚಿಮ ಆಸ್ಟ್ರೇಲಿಯಾ ಸಮುದ್ರ ತೀರದಲ್ಲಿರುವ 'ಪಿಂಕ್ ಲೇಕ್', ಕೆರಿಬಿಯನ್ ತೀರದ ಡೊಮಿನಿಕಾದಲ್ಲಿರುವ 'ಬಾಯ್ಲಿಂಗ್ ಲೇಕ್'ನೊಂದಿಗೆ ಜಗತ್ತಿನ ಅಚ್ಚರಿಗೆ ಕಾರಣವಾಗಿರುವ ಮತ್ತೊಂದು ಸರೋವರವಿದೆ. ಇದರ ನೀರು ಕಪ್ಪು ಬಣ್ಣದಲ್ಲಿ ಇರುವಂತೆ ಕಂಡರೂ ಅದು ನೀರಲ್ಲ. ಬದಲಿಗೆ ಡಾಂಬರು!

ಕೆರಿಬಿಯನ್‌ನ ಟ್ರಿನಿಡಾಡ್ ಹಾಗೂ ಟೊಬಾಗೊದ ನೈರುತ್ಯ ಪ್ರಾಂತ್ಯದಲ್ಲಿರುವ ಈ ಸರೋವರ ವಿಚಿತ್ರವಾಗಿದೆ. ಸ್ಥಳೀಯ ಜನರು ಇದನ್ನು ಜಗತ್ತಿನ ಎಂಟನೇ ಅದ್ಭುತ ಎಂದೂ ಕರೆಯುವುದುಂಟು. ಸರೋವರವು ಬೃಹತ್ತಾದ ಅಂಡಾಕಾರದ ರಚನೆಯಂತಿದ್ದು ಹತ್ತಿರದಿಂದ ನೋಡಲಾಗಿ ಅದೊಂದು ಕಡು ಜೇಡಿಮಣ್ಣಿನಿಂದ ರೂಪುಗೊಂಡಿರುವ ಕಂದಕಗಳ ಸಮೂಹದಂತೆ ಕಂಡು ಬರುತ್ತದೆ. ಪ್ರಕೃತಿ ಸಹಜವಾಗಿ ಮೂಡಿರುವ ವಿಶ್ವದ ಏಕೈಕ ಡಾಂಬರು ಸರೋವರ ಇದಾಗಿದ್ದು, 46 ಲಕ್ಷ ಚದರ ಅಡಿ (106 ಎಕರೆ) ವಿಸ್ತೀರ್ಣವುಳ್ಳ ಹಾಗೂ ಸುಮಾರು 250 ಅಡಿಗಳಷ್ಟು ಆಳವಿದೆ ಈ ಸರೋವರ. ಇದನ್ನು ನೋಡಲು ವಿಶ್ವದ ಮೂಲೆ ಮೂಲೆಯಿಂದಲೂ ಪ್ರವಾಸಿಗರು ಬರುತ್ತಾರೆ. ವರ್ಷಕ್ಕೆ ಸರಾಸರಿ 20 ಸಾವಿರದಷ್ಟು ಪ್ರವಾಸಿಗರನ್ನು ಆಕರ್ಷಿಸುವ ಈ ಸರೋವರದಲ್ಲಿ ಡಾಂಬರಿನ ಗಣಿಗಾರಿಕೆಯನ್ನೂ ನಡೆಸಲಾಗುತ್ತಿದೆ.

16ನೇ ಶತಮಾನದಲ್ಲಿಯೇ ಇದನ್ನು ಪತ್ತೆ ಹಚ್ಚಲಾಗಿದ್ದು, ಕ್ರಿ.ಶ.1595ರಲ್ಲಿ ದಂಡಯಾತ್ರೆ ಕೈಗೊಂಡಿದ್ದ ಸರ್. ವಾಲ್ಟರ್ ರೆಲೈಯ್ ಕೆರೆಬಿಯನ್ ಪ್ರದೇಶದಲ್ಲಿನ ಈ ಸರೋವರವನ್ನು ಮೊದಲ ಬಾರಿಗೆ ಪತ್ತೆಹಚ್ಚಿದ. ಡಾಂಬರನ್ನು ಅವನು ತನ್ನ ನಾವೆಯ ತೂತುಗಳನ್ನು ಮುಚ್ಚಲು ಬಳಸಿ ನಾವೆಯು ಸೋರುವುದನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದ್ದ.

## ವೈಜ್ಞಾನಿಕ ಕಾರಣ

ಸಾವಿರಾರು ವರ್ಷಗಳಷ್ಟು ಹಿಂದೆಯೇ ರೂಪುಗೊಂಡಿರುವ ಸಾಧ್ಯತೆಯಿರುವ ಈ ಸರೋವರವು ಭೂಗರ್ಭದಲ್ಲಿನ ರಾಳದಲ್ಲಿ ಮೇಲ್ಪದರವು ಕೆಳಪದರದ ಕಡೆಗೆ ಚಲನೆಯನ್ನು ಪ್ರಾರಂಭಿಸಿದಾಗ ಅದರ ಮೇಲೆ ಉಂಟು ಮಾಡಬಹುದಾದ ಒತ್ತಡದಿಂದಾಗಿ ಉಂಟಾಗಿರಬಹುದೆಂದು ಅಂದಾಜು ಮಾಡಲಾಗಿದೆ. ಈ ಭಾಗದ ಭೂಪದರಗಳಲ್ಲಿರುವ ಸಂದುಗಳ ಮೂಲಕ ಭಾರವಾದ ವಸ್ತುಗಳನ್ನು ಕೆಳಕ್ಕೆ ಸರಿಸಿ ಹಗುರವಾದ ತೈಲವು ಹೊರಬಂದು ಸೂರ್ಯನ ಶಾಖದಿಂದಾಗಿ ತೈಲ ಆವಿಯಾಗಿ ನಂತರ ಕೆಳಭಾಗದಲ್ಲಿ ಸೇರಿದ್ದ ಡಾಂಬರು ಹೊರಬರುತ್ತದಂತೆ. ಕಡಿಮೆ ಒತ್ತಡದ ಸಂದರ್ಭಗಳಲ್ಲಿ ಭೂಗರ್ಭದಲ್ಲಿನ ಬ್ಯಾಕ್ಟೀರಿಯಾಗಳು ಡಾಂಬರನ್ನು ಪೆಟ್ರೋಲಿಯಮ್ ಆಗಿ ಪರಿವರ್ತಿಸುತ್ತಿದ್ದವೆಂಬುದು ಸಂಶೋಧನೆಗಳಿಂದ ದೃಢಪಟ್ಟಿದೆ.

## ಗುಣಮಟ್ಟದ ಉತ್ಪನ್ನ

ಇಲ್ಲಿ ದೊರೆಯುವ ಡಾಂಬರು ಉತ್ತಮ ಗುಣಮಟ್ಟದ್ದೆಂದು ಹೆಸರು ಪಡೆದಿದ್ದು ಇದುವರೆಗೂ ಸುಮಾರು 50ಕ್ಕೂ ಅಧಿಕ ರಾಷ್ಟ್ರಗಳ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳನ್ನು ಹಾಗೂ ವಿಮಾನ ನಿಲ್ದಾಣಗಳ ರನ್‌ವೇಗಳನ್ನು ಇಲ್ಲಿನ ಡಾಂಬರಿನಿಂದಲೇ ಸಿದ್ಧಪಡಿಸಲಾಗಿದೆಯಂತೆ. ಅಲ್ಲದೆ ಇಂಗ್ಲೆಂಡ್‌ನ ಬಕಿಂಗ್ ಹ್ಯಾಂ ಅರಮನೆಯ ರಸ್ತೆ, ನ್ಯೂಯಾರ್ಕ್‌ನ ಲಾ..ಗಾರ್ಡೇನಿಯಾ ವಿಮಾನ ನಿಲ್ದಾಣಕ್ಕೂ ಸಹ ಇಲ್ಲಿನ ಡಾಂಬರನ್ನು ಬಳಸಲಾಗಿದೆ.

■ ಪ.ನಾ.ಹಳ್ಳಿ ಹರೀಶ್ ಕುಮಾರ್